# ಮರಳಿ ಮಾದೇಶ್ವರ!



ಎರಡು ವರ್ಷಗಳಲ್ಲಿ ಎರಡು ಸಿನಿಮಾ. ಇದು ರಘು ದೀಕ್ಷಿತ್‌ರ ಸಿನಿಮಾ ಬಯೋಡೇಟ. 'ಸೈಕೊ' ಚಿತ್ರ ತೆರೆ ಕಂಡಾಗ ರಘು ದೀಕ್ಷಿತ್ ಸಾಕಷ್ಟು ಸುದ್ದಿಯಲ್ಲಿದ್ದರು; ಸಿನಿಮಾದ ನಿಜನಾಯಕ ಇವರೇ ಎನ್ನುವಷ್ಟರ ಮಟ್ಟಿಗೆ ಪ್ರಸಿದ್ಧರಾಗಿದ್ದರು. 'ನಿನ್ನ ಪೂಜೆಗೆ ಬಂದೆ ಮಾದೇಶ್ವರ' ಗೀತೆ ಜಾಣ ಜಾಣೆಯರ ಪ್ರಾರ್ಥನಾ ಗೀತೆಯಂತಿತ್ತು. ಆದರೆ ಈ ಯಶಸ್ಸು ಅವಕಾಶವಾಗಿ ಪರಿವರ್ತನೆಯಾಗಲಿಲ್ಲ. ಆನಂತರ ಎರಡು ಅವಕಾಶಗಳು ದೊರೆತರೂ, ಅವುಗಳಲ್ಲಿ ಪೂರ್ಣಗೊಂಡಿದ್ದು 'ಜಸ್ಟ್ ಮಾತ್ ಮಾತಲ್ಲಿ' ಮಾತ್ರ. ದೀಕ್ಷಿತ್ ಸಂಗೀತ ನೀಡಿರುವ ಇನ್ನೊಂದು ಚಿತ್ರ 'ಸೂಪರ್‌ಮ್ಯಾನ್' ನೆನೆಗುದಿಯಲ್ಲಿದೆ.

ಹಾಗಾಗಿ ರಘು ಸಂಗೀತ ನೀಡಿರುವ ಚಿತ್ರಗಳು ಸದ್ಯಕ್ಕೆ ಎರಡೇ.

ಮಾದೇಶ್ವರ ಪೂಜೆಯಲ್ಲೇ ಲೀನರಾಗಿದ್ದ ರಘು ದೀಕ್ಷಿತ್ ಮತ್ತೆ ಗಾಂಧಿನಗರದಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರಜ್ವಲ್ ನಟಿಸುತ್ತಿರುವ 'ಕೋಟೆ' ಚಿತ್ರದ ಸಂಗೀತ ಇವರದ್ದೇ. ಪ್ರಜ್ವಲ್‌ರ 'ಸೂಪರ್‌ಮ್ಯಾನ್' ಚಿತ್ರಕ್ಕೆ ದೀಕ್ಷಿತ್ ನೀಡಿದ ಸಂಗೀತ ಪ್ರಜ್ವಲ್‌ಗೆ ಸಿಕ್ಕಾಪಟ್ಟೆ ಖುಷಿಯಾಗಿತ್ತು. ಆ ಖುಷಿಯಲ್ಲೇ 'ಕೋಟೆ' ಚಿತ್ರದ ನಿರ್ದೇಶಕ ಶ್ರೀನಿವಾಸರಾಜು ಅವರಿಗೆ ದೀಕ್ಷಿತ್‌ರನ್ನು ಪರಿಚಯಿಸಿದರು. ಈಗ ಕೋಟೆಯಲ್ಲಿ ಸಂಗೀತದ ಅನುರಣನ.

ಹೊಸ ತಲೆಮಾರಿನ ತವಕ ತಲ್ಲಣಗಳನ್ನು ಸಂಗೀತದಲ್ಲಿ ಹಿಡಿದಿಡುವುದರಲ್ಲಿ ರಘು ದೀಕ್ಷಿತ್ ನಿರಂತರ ಪ್ರಯೋಗಶೀಲರು. ಹಾಂ, ಸಂಗೀತವನ್ನಷ್ಟೇ ಸಂಯೋಜಿಸುವುದಿಲ್ಲ, ಸಾಹಿತ್ಯವನ್ನೂ ರಚಿಸಬಲ್ಲರು. ಹಾಡುವುದನ್ನೂ ಬಲ್ಲಿದರು. ಅವರ ಸಾಹಿತ್ಯ–ಸಂಗೀತ ಎರಡೂ ಸರಳ ಹಾಗೂ ಸರಾಗ. ಅವರ ಆಧುನಿಕ ಸಂಗೀತದ ಹಿನ್ನೆಲೆಯಲ್ಲಿ ಭಾರತೀಯ ಸಾಂಪ್ರದಾಯಿಕ ಸಂಗೀತದ ನಿನಾದವನ್ನೂ ಕೇಳಬಹುದು ಎನ್ನುವುದು ರಘು ಸಂಗೀತದ ವಿಶೇಷ. ಭಾರತೀಯ ಸಂಸ್ಕೃತಿ, ವೈವಿಧ್ಯದಲ್ಲಿ ಏಕತೆ, ಭಾಷೆಗಳ ಪ್ರಬುದ್ಧತೆ– ಇವೆಲ್ಲವನ್ನೂ ಭಾಷಾತೀತ ಸಂಗೀತದಲ್ಲಿ ಹಿಡಿದಿಡುವುದು ಅವರ ತವಕ. ಬೇಕಿದ್ದರೆ, ಇವರ ಶೈಲಿಯನ್ನು ಆಧುನಿಕ ಜಾನಪದ ಎನ್ನಬಹುದು. ಅಂದ ಹಾಗೆ, ದೀಕ್ಷಿತ್ ಮೈಕ್ರೊಬಯಾಲಜಿಯಲ್ಲಿ ಸ್ವರ್ಣ ಪದಕದೊಂದಿಗೆ ಸ್ನಾತಕೋತ್ತರ ಪದವಿ ಪಡೆದ ಪ್ರತಿಭಾವಂತರು. ಭರತನಾಟ್ಯದಲ್ಲಿ 'ವಿದ್ವತ್' ಪ್ರಮಾಣಪತ್ರ ಪಡೆದ ಅಗ್ಗಳಿಕೆಯೂ ಅವರದ್ದೇ. ಎಲ್ಲಿಯ ಮೈಕ್ರೊಬಯಾಲಜಿ? ಎಲ್ಲಿಯ ಸಂಗೀತ? ಎಲ್ಲಿಯ ಭರತನಾಟ್ಯ?– ಈ ವೈವಿಧ್ಯ ವೈರುಧ್ಯಗಳೇ ಅವರ ಸಂಗೀತದ ಯಶಸ್ಸಿನ ಗುಟ್ಟು.

ಅನೇಕ ಸಂಗೀತ ಕಾರ್ಯಕ್ರಮಗಳನ್ನು ನೀಡಿರುವ ರಘು ದೀಕ್ಷಿತ್, ಆಕಾಶವಾಣಿ ಮತ್ತು ಕಿರುತೆರೆಗಾಗಿ ಕಾರ್ಯಕ್ರಮಗಳನ್ನು ರೂಪಿಸಿದ ಅನುಭವಿ ಕೂಡ. ಸಾವಿರಾರು ಜಿಂಗಲ್‌ಗಳ ರೂವಾರಿ ಅವರು.

ಮತ್ತೆ 'ಕೋಟೆ'ಯ ಮಾತಿಗೆ ಬರೋಣ. ಈ ಚಿತ್ರ ಅವರ ಪ್ರಯೋಗಶೀಲತೆಯ ಇನ್ನೊಂದು ವೇದಿಕೆ. ಮೊದಲ ಬಾರಿಗೆ ಟಪ್ಪಾಂಗುಚ್ಚಿ, ಐಟಂ ಸಾಂಗ್ ಮಾದರಿಯ ಗೀತೆಗಳನ್ನು ದೀಕ್ಷಿತ್ ಸಂಯೋಜಿಸಿದ್ದಾರಂತೆ. ಅಲ್ಲಿಗೆ ಗಾಂಧಿನಗರದ ಶೈಲಿಗೆ ಅವರು ಒಗ್ಗಿಕೊಂಡಂತಾಯಿತು.

'ಜಸ್ಟ್ ಮಾತ್ ಮಾತಲ್ಲಿ' ಚಿತ್ರದಲ್ಲಿ ರಘು ಪ್ರಮುಖ ಗಾಯಕರಾಗಿ ಹಾಡಿದ್ದು ಕೆಲವರ ಟೀಕೆಗೊಳಗಾಗಿತ್ತು. 'ಮೂಲತಃ ನಾನೊಬ್ಬ ಹಾಡುಗಾರ. ಹಾಡುವ ಹಂಬಲ ಸಹಜ' ಎನ್ನುವುದು ಅವರ ಪ್ರತಿಕ್ರಿಯೆ. ಆದರೆ, ವೃಥಾ ಟೀಕೆಗಳಿಗೆ ಅವಕಾಶ ಕಲ್ಪಿಸಬಾರದೆಂದು ಸದ್ಯಕ್ಕೆ ತಮ್ಮ ಹಾಡುವ ಹಂಬಲ ಹತ್ತಿಕ್ಕಿಕೊಳ್ಳಲು ಅವರು ನಿರ್ಧರಿಸಿದ್ದಾರೆ.

★ ರಚಹ

